**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾ ಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.**

**ಸಿ.ಸಿ. ಸಂಖ್ಯೆ: 4842/2022**

| | |
|---|---|
| ಫಿರ್ಯಾದಿದಾರರು: | ಸರ್ಕಾರದ ಪರ ಬಿಳಿಕೆರೆ ಪೊಲೀಸ್ ಠಾಣೆ<br>ಹುಣಸೂರು ವೃತ್ತ, ಹುಣಸೂರು. |
| | ವಿರುದ್ಧ, |
| ಆರೋಪಿ/ಗಳು : | **ಮಹೇಶ,**<br>ಬಿನ್ ಲೇಟ್ ನಾರಾಯಣಗೌಡ<br>ಸುಮಾರು **36** ವರ್ಷ ವಯಸ್ಸು,<br>ವಾಸ: ರಾಯನಹಳ್ಳಿ ಗ್ರಾಮ,<br>ಮೈಸೂರು ಜಿಲ್ಲೆ. |

**ದೋಷಾರೋಪಣೆ**

ಶ್ರೀಮತಿ ನಮೃತಾ ಎಸ್. ಹೊಸಮಠ, ಬಿ.ಎ., ಎಲ್.ಎಲ್.ಬಿ., ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

1. ದಿನಾಂಕ: 25.05.2022 ರಂದು ಮಧ್ಯಾಹ್ನ 03.45 ಗಂಟೆ ಸಮಯದಲ್ಲಿ ಬಿಳಿಕೆರೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ ರಾಯನಹಳ್ಳಿ ಗ್ರಾಮದ ನಂಜುಂಡಸ್ವಾಮಿರವರ ಬಾಬ್ತು, ಪಟೇಲ್ ಎಂಟರ್ ಪ್ರೈಸೆಸ್ ಸಿಮೆಂಟ್ ಎಲೆಕ್ಟ್ರಿಕಲ್ ಫ್ಯಾಕ್ಟರಿಯ ಪಕ್ಕದಲ್ಲಿರುವ ಆರೋಪಿಯಾದ ನಿಮ್ಮ ಬಾಬ್ತು ಸರ್ವೆ ನಂ-04/04 ರ ಜಮೀನಿನಲ್ಲಿ ನಿಂತುಕೊಂಡು ಈ ಹಿಂದೆ ಸಾಕ್ಷಿ-1 ರವರ ಪ್ಯಾಕ್ಟರಿಯಲ್ಲಿ ಆರೋಪಿಯಾದ ನೀವು ಕಬ್ಬಿಣ ತೆಗೆದು ಕೊಂಡು ಹೋಗಿರುವ ವಿಚಾರವನ್ನು ಗ್ರಾಮದವರಿಗೆ ತಿಳಿಸಿದ್ದರಿಂದ

ಅದೇ ದ್ವೇಷ ಇಟ್ಟುಕೊಂಡು ಫ್ಯಾಕ್ಟರಿಯಲ್ಲಿದ್ದ ಸಾಕ್ಷಿ 01 ರವರನ್ನು ಬರಮಾಡಿಕೊಂಡು ನಿನಗೆ ಸರಿಯಾಗಿ ಮಾಡುತ್ತೇನೆಂದು ಹೇಳಿ ಅಡ್ಡಗಟ್ಟಿ ಅವರಿಗೆ ಮುಂದೆ ಹೋಗದಂತೆ ಅಕ್ರಮ ತಡೆಯನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **341 ರ** ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

2. ಎರಡನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ ಆರೋಪಿಯಾದ ನೀವು ಅಪರಾಧ ಎಸಗುವ ಉದ್ದೇಶವುಳ್ಳವರಾಗಿ, ಸೂಳೆ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **504 ರ** ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

3. ಮೂರನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ ಆರೋಪಿಯಾದ ನೀವು ಅಪರಾಧ ಎಸಗುವ ಉದ್ದೇಶವುಳ್ಳವರಾಗಿ, ನಿಮ್ಮ ಕೈಯಲ್ಲಿ ಹಿಡಿದಿದ್ದ ಮಾರಕಾಸ್ತ್ರವಾದ ಕಲ್ಲಿನಿಂದ ಸಾಕ್ಷಿ-1 ರವರ ತಲೆಯ ಹಿಂಭಾಗಕ್ಕೆ ಹೊಡೆದು ನಂತರ ದೊಣ್ಣೆಯಿಂದ ಸಾಕ್ಷಿ-1 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **324 ರ** ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

4. ಕೊನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ ಆರೋಪಿಯಾದ ನೀವು ಅಪರಾಧ ಎಸಗುವ ಉದ್ದೇಶವುಳ್ಳವರಾಗಿ, ಸಾಕ್ಷಿ-1 ರವರಿಗೆ ಹಲ್ಲೆ ಮಾಡುತ್ತಿದ್ದ ಸಂದರ್ಭದಲ್ಲಿ ಅಲ್ಲೇ

ಇದ್ದ ಸಾಕ್ಷಿ-03 ಮತ್ತು 04 ರವರು ಜಗಳ ಬಿಡಿಸಿದರು ಆಗ ಆರೋಪಿಯಾದ ನೀವು ಸುಮ್ಮನಿರದೆ ಮಗನೇ ನಿನ್ನನ್ನು ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **506 ರ** ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

(ಮೇಲ್ಕಂಡ ಆಪಾದನೆಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆಪಾದನೆಗಳಿಗೆ ಆರೋಪಿಯಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

**(ನಮ್ರುತಾ ಎಸ್. ಹೊಸಮಠ)**

ದಿನಾಂಕ: **20.05.2025** ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾ ಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.**

**ಸಿ.ಸಿ. ಸಂಖ್ಯೆಃ 4842/2022**

ಫಿರ್ಯಾದಿದಾರರುಃ ಸರ್ಕಾರದ ಪರ ಬಿಳಿಕೆರೆ ಪೊಲೀಸ್ ಠಾಣೆ
ಹುಣಸೂರು ವೃತ್ತ, ಹುಣಸೂರು.

ವಿರುದ್ಧ,

ಆರೋಪಿ/ಗಳು : **ಮಹೇಶ,**
ಬಿನ್ ಲೇಟ್ ನಾರಾಯಣಗೌಡ

ಭಾರತೀಯ ದಂಡ ಸಂಹಿತೆ ಕಲಂ 240(2) ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆಃ ನಿಮಗೆ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?

ಉತ್ತರಃ

ಪ್ರಶ್ನೆಃ ತಪ್ಪೊಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ?

ಉತ್ತರಃ

ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿಯು ನೀಡಿದ ಉತ್ತರವನ್ನು ಹಾಗೆಯೇ ದಾಖಲಿಸಿಕೊಂಡಿದೆಯೆಂದು ಈ ಮೂಲಕ ದೃಢೀಕರಿಸುತ್ತೇನೆ.

**(ನಮ್ರತಾ ಎಸ್. ಹೊಸಮಠ)**
ದಿನಾಂಕಃ **20.05.2025** ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.